


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ದಂಡಯಾತ್ರೆಗಳ ವಿವಿಧ ಘಟನೆಗಳು ಮತ್ತು ಜಮಾಅತಿನ ನಿಷ್ಠಾವಂತ ಸೇವಕರ ನಿಧನವಾರ್ತೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–05–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಸಹ ನಾನು ಕೆಲವು ದಂಡಯಾತ್ರೆಗಳ ಕುರಿತು ಪ್ರಸ್ತಾಪಿಸುತ್ತೇನೆ. ಅನಂತರ ಇತರ ವಿಷಯಗಳ ಕುರಿತು ಹೇಳುವೆನು.

ಶಅಬಾನ್ 8ನೇ ಹಿಜರಿಯಲ್ಲಿ ಖಝ್‌ರದ ಕಡೆಗೆ ಅಬೂ ಖತ್ತಾದ ಅನ್ಸಾರಿ(ರ)ರ ದಂಡಯಾತ್ರೆ ನಡೆಯಿತು. ಅಲ್ಲಿ ಬನೂ ಗತ್ಫಾನ್ ಗೋತ್ರದ ಒಂದು ಶಾಖೆಯು ನೆಲೆಸಿತ್ತು. ನಜದ್ ಪ್ರದೇಶದ ಖಝ್‌ರದಲ್ಲಿ ನೆಲೆಸಿದ್ದ ಬನೂ ಗತ್ಫಾನ್‌ನವರು ಮದೀನಾದ ವಿರುದ್ಧ ಪಿತೂರಿ ಮಾಡುವುದರಲ್ಲಿ ನಿರತರಾಗಿದ್ದರು. ಒಂದು ವರದಿಯ ಪ್ರಕಾರ, ಈ ಕಾರ್ಯಾಚರಣೆಯಲ್ಲಿ ಸಹಾಬಿಯರು ಹದಿನೈದು ರಾತ್ರಿಗಳ ಕಾಲ ಹೊರಗಿದ್ದರು ಹಾಗೂ ಇನ್ನೂರು ಒಂಟೆಗಳು, ಒಂದು ಸಾವಿರ ಮೇಕೆಗಳು ಮತ್ತು ಅನೇಕ ಕೈದಿಗಳನ್ನು ಹಿಡಿದು ತಂದರು.

8ನೇ ಹಿಜರಿ ರಮಝಾನಿನಲ್ಲಿ (ಕ್ರಿ.ಶ. 630 ಜನವರಿ) ಇಝುಮ್ ಕಣಿವೆ ಕಡೆಗೆ ಹಝ್ರತ್ ಅಬೂ ಖತ್ತಾದ(ರ)ರ ಮತ್ತೊಂದು ದಂಡಯಾತ್ರೆ ನಡೆಯಿತು. ಈ ದಂಡಯಾತ್ರೆಯ ಹಿಂದಿನ ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ) ಮಕ್ಕಾ ವಿಜಯಕ್ಕಾಗಿ ಹೊರಡಲು ಉದ್ದೇಶಿಸಿದಾಗ, ತಾವು ಮಕ್ಕಾದ ಕಡೆಗೆ ಹೋಗುತ್ತಿಲ್ಲ, ಬದಲಿಗೆ ಅಝುಮ್ ಕಡೆಗೆ ಹೋಗುತ್ತಿದ್ದೇವೆ ಎಂದು ಜನರು ಭಾವಿಸುವಂತೆ ಮಾಡಲು ಹಝ್ರತ್ ಅಬೂ ಖತ್ತಾದ(ರ)ರನ್ನು ಮದೀನದ ಪೂರ್ವದಲ್ಲಿ ಇರುವ ಅಝುಮ್ ಕಣಿವೆ ಕಡೆಗೆ ಕಳುಹಿಸಿದರು. ಆದರೆ ಮಕ್ಕ ಪಟ್ಟಣವಿರುವುದು ದಕ್ಷಿಣ ದಿಕ್ಕಿನ ಕಡೆಗೆ ಆಗಿದೆ. ಒಂದು ವರದಿಯ ಪ್ರಕಾರ, ಈ ದಂಡಯಾತ್ರೆಯ ನಾಯಕ ಹಝ್ರತ್ ಅಬ್ದುಲ್ಲಾ ಬಿನ್ ಅಬೂ ಹದ್‌ರದ್(ರ) ಆಗಿದ್ದರು.

ಹಝ್ರತ್ ಅಬ್ದುಲ್ಲಾ ಬಿನ್ ಅಬೂ ಹದ್‌ರದ್(ರ) ವಿವರಿಸುತ್ತಾರೆ: ನಾವು ಅಝುಮ್ ಕಣಿವೆಗೆ ತಲುಪಿದಾಗ, ಆಮಿರ್ ಬಿನ್ ಅಝ್‌ಬತ್ ಅಶ್‌ಜಈ ನಮ್ಮನ್ನು ದಾಟಿ ಹೋದರು. ಆತ ನಮ್ಮ ಬಳಿಗೆ ಬಂದು ಮುಸ್ಲಿಮರು ಹೇಳುವ ರೀತಿಯಲ್ಲಿ ಸಲಾಂ ಹೇಳಿದ. ಆಗ ಮುಸ್ಲಿಮರು ಆ ವ್ಯಕ್ತಿಯ ಮೇಲೆ ಕೈ ಎತ್ತುವುದರಿಂದ ಹಿಂದೆ ಸರಿದರು, ಆದರೆ ಹಝ್ರತ್ ಮುಹ್‌ಲಮ್ ಬಿನ್ ಜುಸಾಮ ಲೈಸೀ(ರ)ರಿಗೆ ಆ ವ್ಯಕ್ತಿಯೊಂದಿಗೆ ಹಿಂದಿನಿಂದಲೇ ಜಗಳವಿತ್ತು. ಆದ್ದರಿಂದ, ಅವರು ಆಮಿರ್ ಬಿನ್ ಅಝ್‌ಬತ್‌ನ ಮೇಲೆ ಹಲ್ಲೆ ಮಾಡಿ ಆತನನ್ನು ಕೊಂದು, ಆತನ ಸಾಮಾನು ಮತ್ತು ಒಂಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇದರ ಹೊರತಾಗಿ, ಸಹಾಬಿಯರಿಗೆ ಬೇರೆ ಯಾವುದೇ ಗುಂಪನ್ನು ಎದುರಿಸಬೇಕಾಗಿ ಬರಲಿಲ್ಲ. ಏಕೆಂದರೆ, ಅವರನ್ನು ಕೇವಲ ಮುಶ್ರಿಕರ ಗಮನವನ್ನು ಬೇರೆಡೆ ಸೆಳೆಯಲು ಕಳುಹಿಸಲಾಗಿತ್ತು. ಆದ್ದರಿಂದ, ಸಹಾಬಿಯರು ಅಲ್ಲಿಂದ ಹಿಂದಿರುಗಿದರು. ಇದೇ ವೇಳೆ, ಹಝ್ರತ್ ಪೈಗಂಬರ್(ಸ) ಮಕ್ಕಾದ ಕಡೆಗೆ ಹೊರಟಿದ್ದಾರೆ ಎಂದು ಅವರಿಗೆ ಸುದ್ದಿ ತಲುಪಿತು. ಆದ್ದರಿಂದ ಅವರು ಸಹ ಆ ಕಡೆಗೆ ಹೊರಟರು ಮತ್ತು ಮಾರ್ಗದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಸೇರಿಕೊಂಡರು. ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಾಗ, ಈ ಕೊಲೆಯ ಸಂಪೂರ್ಣ ಘಟನೆಯನ್ನು ಅವರಿಗೆ ವಿವರಿಸಿ ಕೊಡಲಾಯಿತು. ಆಗ ಪವಿತ್ರ ಖುರ್‌ಆನಿನ ಈ ವಚನ ಅವತರಿಸಿತು: "ಎಲೈ ವಿಶ್ವಾಸಿಗಳೇ, ನೀವು ಅಲ್ಲಾಹನ ಮಾರ್ಗದಲ್ಲಿ ಸಂಚರಿಸುವಾಗ ಕೂಲಂಕಷವಾಗಿ ಪರಿಶೀಲನೆ ಮಾಡಿರಿ. ಯಾರಾದರೂ ನಿಮಗೆ ಶಾಂತಿಯ ವಚನವನ್ನು ಹಾರೈಸಿದರೆ, 'ನೀನು ವಿಶ್ವಾಸಿಯಲ್ಲ' ಎಂದು ಹೇಳಬೇಡಿರಿ. ನೀವು ಇಹಲೋಕದ ವಸ್ತುಗಳನ್ನು ಬಯಸುತ್ತೀರಿ. ಆದರೆ ಅಲ್ಲಾಹನ ಬಳಿ ಧಾರಾಳ ಸಂಪತ್ತಿದೆ. ಇದಕ್ಕೆ ಮುಂಚೆ ನೀವು ಸಹ ಅವರಂತೆ ಇದ್ದಿರಿ. ನಂತರ ಅಲ್ಲಾಹನು ನಿಮ್ಮನ್ನು ಅನುಗ್ರಹಿಸಿದನು. ಆದ್ದರಿಂದ ನೀವು ಸೂಕ್ಷ್ಮವಾಗಿ ಪರಿಶೀಲಿಸಿಕೊಳ್ಳಿರಿ. ನಿಶ್ಚಯವಾಗಿಯೂ ನಿಮ್ಮ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲನು."

(ಹುಝೂರ್ ಹೇಳಿದರು:) ಈ ದಂಡಯಾತ್ರೆ 8ನೇ ಹಿಜರಿಯಲ್ಲಿ ನಡೆದಿತ್ತು, ಆದರೆ ಈ ವಚನ ಸೂರ ನಿಸಾದ ಭಾಗವಾಗಿದೆ, ಇದು ಹಿಜರಿ 3 ಮತ್ತು 5ನೇ ವರ್ಷದ ನಡುವೆ ಅವತೀರ್ಣಗೊಂಡಿತ್ತು ಎಂದು ಬಹುತೇಕರು ಒಪ್ಪುತ್ತಾರೆ. ಆದ್ದರಿಂದ ಈ ಘಟನೆಯ ಬಗ್ಗೆ ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ತನ್ನ ಅಸಂತುಷ್ಟಿಯನ್ನು ವ್ಯಕ್ತಪಡಿಸಲು ಈ ವಚನವನ್ನು ಪಠಿಸಿರಬಹುದು.

(ಅನಂತರ ಹುಝೂರ್ ಹೇಳಿದರು:) ಈಗ ನಾನು ಜಮಾಅತಿನ ಒಬ್ಬ ಹಿರಿಯ ಮತ್ತು ಶ್ರೇಷ್ಠ ವಿದ್ವಾಂಸರಾದ, ಖಿಲಾಫತಿಗೆ ಸಂಪೂರ್ಣವಾಗಿ ವಿಧೇಯರಾಗಿದ್ದ, ದೀನಿನ ಅಪ್ರತಿಮ ಸೇವಕರಾಗಿದ್ದ ಒಬ್ಬರ ಬಗ್ಗೆ ಪ್ರಸ್ತಾಪಿಸುತ್ತೇನೆ. ಅವರು ಇತ್ತೀಚೆಗೆ ನಿಧನರಾದರು. ಹಾಗೆಯೇ, ಈ ದಿನಗಳಲ್ಲಿ ಬಂಧಿತರಾಗಿ ಜೈಲಿನಲ್ಲಿದ್ದ ಮತ್ತೊಬ್ಬ ನಿಷ್ಠಾವಂತ ಅಹ್ಮದಿ ನಿಧನರಾದರು. ಅವರ ಬಗ್ಗೆಯೂ ಹೇಳುತ್ತೇನೆ.

ಮೊದಲನೆಯದಾಗಿ, ಸೈಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್‌ರ ಬಗ್ಗೆ ಹೇಳುತ್ತೇನೆ. ಇವರು ಹಝ್ರತ್ ಸೈಯದ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ)ರ ಪುತ್ರರಾಗಿದ್ದು, 96ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರು ಹಝ್ರತ್ ಅಮ್ಮಾ ಜಾನ್(ರ)ರ ಸೋದರ ಪುತ್ರ ಮತ್ತು ಹಝ್ರತ್ ಮುಸ್ಲಿಹ್ ಮೌಊದ್(ರ) ಹಾಗೂ ಹಝ್ರತ್ ಮರ್‌ಯಮ್ ಸಿದ್ದೀಖ ಸಾಹಿಬ(ರ)ರ ಅಳಿಯ ಆಗಿದ್ದರು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಖಾದಿಯಾನಿನಲ್ಲಿ ಪಡೆದರು, ನಂತರ ಪಂಜಾಬ್ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದರು. ಮಾರ್ಚ್ 1944ರಲ್ಲಿ, ಅವರ ತಂದೆ ಹಝ್ರತ್ ಸೈಯದ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ)ರ ನಿಧನದ ದಿನವೇ ಅವರು ತಮ್ಮ ಜೀವಿತವನ್ನು ದೀನಿಗಾಗಿ ವಖ್ಫ್ ಮಾಡಿಕೊಂಡರು. ಆ ಸಮಯದಲ್ಲಿ ಸೈಯದ್ ಮಹ್ಮೂದ್ ಅಹ್ಮದ್ ಸಾಹಿಬ್‌ರ ವಯಸ್ಸು ಕೇವಲ ಹದಿನಾಲ್ಕು ವರ್ಷ ಆಗಿತ್ತು.

ಅವರ ಜಮಾಅತ್ ಸೇವೆಗಳು ಹೀಗಿವೆ: 1954ರಿಂದ 1957ರ ವರೆಗೆ ಅವರು ಇಂಗ್ಲೆಂಡ್‌ನಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ, ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನದಂತೆ ಸ್ಕೂಲ್ ಆಫ್ ಓರಿಯಂಟಲ್ ಆಫ್ರಿಕನ್ ಸ್ಟಡೀಸ್‌ನಲ್ಲೂ ಶಿಕ್ಷಣವನ್ನು ಪಡೆದರು. ಆ ಸಮಯದಲ್ಲಿ ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ರೊಂದಿಗೆ ಇದ್ದರು. 1957ರಿಂದ 1959ರ ವರೆಗೆ ವಕಾಲತೇ ದೀವಾನಿನಲ್ಲಿ ಮೀಸಲು ಮಿಷನರಿಯಾಗಿ ಸೇವೆ ಸಲ್ಲಿಸಿದರು. ಅನಂತರ 1960ರಲ್ಲಿ ಜಾಮಿಅ ಅಹ್ಮದಿಯದಲ್ಲಿ ಶಿಕ್ಷಕರಾಗಿ ನೇಮಕಗೊಂಡರು. 1978ರಿಂದ 1982ರ ವರೆಗೆ ಅಮೆರಿಕದಲ್ಲಿ ಮಿಷನರಿಯಾಗಿ ಸೇವೆ ಸಲ್ಲಿಸಿದರು. 1982ರಿಂದ 1986ರ ವರೆಗೆ ಸ್ಪೇನ್‌ನಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿತು. 1986ರಿಂದ 1989ರ ವರೆಗೆ ವಕಾಲತೇ ತಸ್‌ನೀಫ್ ಆಗಿ ಕೆಲಸ ಮಾಡಿದರು. 1986ರಿಂದ 2010ರ ವರೆಗೆ ಜಾಮಿಅ ಅಹ್ಮದಿಯಾ ರಬ್ವದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ, 1994ರಿಂದ ಜುಲೈ 2001ರ ವರೆಗೆ ವಕಾಲತೇ ತಾಲೀಮ್ ಆಗಿಯೂ ಸೇವೆ ಸಲ್ಲಿಸಿದರು. ಅದೇ ರೀತಿಯಲ್ಲಿ ಅವರು ರಿಸರ್ಚ್ ಸೆಲ್ ಮತ್ತು ಶಿಲುಬೆಯ ಘಟನೆಯ ಸೆಲ್‌ನ ಸೆಕ್ರಟರಿ ಆಗಿದ್ದರು. 2005ರಲ್ಲಿ ನೂರ್ ಫೌಂಡೇಶನ್ ಸ್ಥಾಪನೆಯಾದಾಗ, ಅವರು ಅದರ ಅಧ್ಯಕ್ಷರಾಗಿ ನೇಮಕಗೊಂಡರು ಮತ್ತು ತಮ್ಮ ಕೊನೆಯುಸಿರಿನ ವರೆಗೂ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಅವರು ಮಜ್ಲಿಸೇ ಇಫ್ತಾದ (ಧಾರ್ಮಿಕ ತೀರ್ಪುಗಳ ಸಮಿತಿ) ಸದಸ್ಯರೂ ಆಗಿದ್ದರು. ಖುದ್ದಾಮುಲ್ ಅಹ್ಮದಿಯಾದಲ್ಲಿ ವಿವಿಧ ಹುದ್ದೆಗಳಲ್ಲಿ, ಮುಹ್‌ತಮಿಮ್ (ಕಾರ್ಯದರ್ಶಿ) ಮತ್ತು ನಾಯಬ್ ಸದರ್ (ಉಪಾಧ್ಯಕ್ಷ) ಆಗಿ ಸೇವೆ ಸಲ್ಲಿಸಲು ಅವರಿಗೆ ಅವಕಾಶ ಸಿಕ್ಕಿತು.

ಶೈಕ್ಷಣಿಕ ಕ್ಷೇತ್ರದಲ್ಲಿ, ಅವರು ಪವಿತ್ರ ಖುರ್‌ಆನ್ ಅನುವಾದದ ಸಿದ್ಧತೆಯಲ್ಲಿ ಸಹಾಯ ಮಾಡಿದ್ದರು. ಅವರು ಸಿಹಾಹ್ ಸಿತ್ತ (ಆರು ಪ್ರಮುಖ ಹದೀಸ್ ಗ್ರಂಥಗಳು) ಮತ್ತು ಮುಸ್ನದ್ ಅಹ್ಮದ್ ಬಿನ್ ಹನ್‌ಬಲನ್ನು ಉರ್ದುವಿಗೆ ಅನುವಾದಿಸಿದರು. ಸಹೀಹ್ ಮುಸ್ಲಿಂ ಮತ್ತು ಶುಮಾಯಿಲ್ ತಿರ್ಮಿಧಿಗಳಿಗೆ ವ್ಯಾಖ್ಯಾನವನ್ನು ಬರೆದರು. ಬೈಬಲ್ ಕುರಿತು ಶೈಕ್ಷಣಿಕ ಪ್ರಬಂಧಗಳನ್ನು ಬರೆದರು ಮತ್ತು 'ಕಫನೇ ಮಸೀಹ್' ಹಾಗೂ 'ಮರ್ಹಮೇ ಈಸಾ' ಕುರಿತು ಸಂಶೋಧನಾ ಕೆಲಸವನ್ನು ಮಾಡಿದರು. ಅವರ ಪ್ರಕಟಿತ ಪುಸ್ತಕಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟ ಮೂರು ಸಂಪುಟಗಳು ಮತ್ತು ನಮಾಝಿನ ನಂತರದ ದೈನಂದಿನ ದರ್ಸಿಗಾಗಿ ಒಂದು ಕಿರುಪುಸ್ತಕ ಸೇರಿವೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ತಮ್ಮ ಪುತ್ರಿಯೊಂದಿಗೆ ಅವರ ವಿವಾಹವನ್ನು ನೆರವೇರಿಸಿದ್ದರು. ಅವರ ಪುತ್ರನ ನಿಕಾಹನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ನೆರವೇರಿಸಿದ್ದರು.

1990ರಲ್ಲಿ ಮಜ್ಲಿಸೇ ಶೂರಾದಲ್ಲಿ ನೀಡಿದ ಹೇಳಿಕೆಗಾಗಿ ಅವರ ವಿರುದ್ಧ ಮೊಕದ್ದಮೆ ದಾಖಲಾಗಿತ್ತು. ನೀವು ನಿಮ್ಮ ಭಾಷಣದಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರ ಅಪಮಾನ ಮಾಡಿದ್ದೀರಿ ಎಂದು ನ್ಯಾಯಾಧೀಶರು ಅವರೊಡನೆ ಹೇಳಿದರು. ಇದಕ್ಕೆ ಉತ್ತರಿಸುತ್ತಾ ಅವರು ಹೀಗೆ ಹೇಳಿದರು: "ಇದು ನನ್ನ ಮೇಲೆ ಸಂಪೂರ್ಣ ಸುಳ್ಳಾದ ಆರೋಪವಾಗಿದೆ. ನಾನು ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರನ್ನು ಮನಸ್ಸಾರೆ ಗೌರವಿಸುತ್ತೇನೆ ಮತ್ತು ಅವರ ಪ್ರವಾದಿತ್ವದಲ್ಲಿ ದೃಢವಾದ ನಂಬಿಕೆ ಇಟ್ಟುಕೊಂಡಿದ್ದೇನೆ" ಅವರು ನ್ಯಾಯಾಧೀಶರ ಮುಂದೆ ಈ ಹೇಳಿಕೆಯನ್ನು ಅತ್ಯಂತ ಧೈರ್ಯದಿಂದ ನೀಡಿದ್ದರು.

ಧಾರ್ಮಿಕ ಜ್ಞಾನದಲ್ಲಿ, ಇಸ್ಲಾಂ ಅಲ್ಲದೆ ಯಹೂದಿ ಧರ್ಮ, ಕ್ರೈಸ್ತ ಧರ್ಮ ಇತ್ಯಾದಿಗಳಲ್ಲಿ ಅವರು ವಿಶೇಷ ಪರಿಣತಿ ಹೊಂದಿದ್ದರು. ವಿಭಿನ್ನ ಧರ್ಮಗಳ ಹೋಲಿಕೆಯಲ್ಲಿ ಅವರು ವಿಶೇಷ ಕೌಶಲ್ಯ ಹೊಂದಿದ್ದರು. ಪವಿತ್ರ ಖುರ್‌ಆನ್, ಪ್ರವಾದಿಚರ್ಯೆ, ಸಹೀಹ್ ಹದೀಸುಗಳು, ಹಝ್ರತ್ ಮಸೀಹ್ ಮೌಊದ್(ಅ) ಹಾಗೂ ಅವರ ಖಲೀಫರ ಬರಹಗಳಿಂದ ಮಾರ್ಗದರ್ಶನ ಪಡೆಯಲು ಅವರು ಸದಾ ಸಲಹೆ ನೀಡುತ್ತಿದ್ದರು.

ಮುಬಶ್ಶಿರ್ ಅಯಾಝ್ ಸಾಹಿಬ್ ಬರೆಯುತ್ತಾರೆ: ಮೀರ್ ಸಾಹಿಬ್ ಅತ್ಯಂತ ನಿಷ್ಕಳಂಕ ಮತ್ತು ಪವಿತ್ರ ಜೀವನ ನಡೆಸಿದರು. ಅವರು ಅತ್ಯಂತ ಪರಿಶುದ್ಧಿಯಿಂದ ಮತ್ತು ವಿನಮ್ರತೆಯಿಂದ ಇರುತ್ತಿದ್ದರು. ಇರುವುದರಲ್ಲಿ ಸಂತೃಪ್ತಿ ಮತ್ತು ಅಲ್ಲಾಹನಲ್ಲಿ ಭರವಸೆಯ ಉನ್ನತ ಉದಾಹರಣೆಯಾಗಿ ಅವರು ಇದ್ದರು. ಅವರು ಜ್ಞಾನ ಮತ್ತು ಅರಿವಿನ ಸಾಗರವಾಗಿದ್ದರು, ಒಬ್ಬ ಮಹಾನ್ ವಿದ್ವಾಂಸರಾಗಿದ್ದರು. ಅವರು ವ್ಯಾಖ್ಯಾನಕಾರರೂ ಆಗಿದ್ದರು ಮತ್ತು ಹದೀಸ್ ಪಂಡಿತರೂ ಆಗಿದ್ದರು. ಅವರು ಅಹ್ಮದಿಯಾ ಜಮಾಅತಿನ ಚರಿತ್ರೆಯಲ್ಲಿ ಪವಿತ್ರ ಖುರ್‌ಆನ್ ಅನುವಾದದ ಜೊತೆಗೆ ಸಂಪೂರ್ಣ ಸಿಹಾಹ್ ಸಿತ್ತ ಹದೀಸ್ ಸಂಗ್ರಹವನ್ನು ಉರ್ದುವಿಗೆ ಅನುವಾದಿಸುವ ಸೌಭಾಗ್ಯ ಪಡೆದ ಮೊದಲ ಭಾಗ್ಯಶಾಲಿ ವಿದ್ವಾಂಸರು ಆಗಿದ್ದರು.

ಖಾದಿಯಾನಿನ ಮುರಬ್ಬಿ ತನ್ವೀರ್ ನಾಸಿರ್ ಸಾಹಿಬ್ ಹೇಳುತ್ತಾರೆ: ಅವರ ಬಗ್ಗೆ ನನಗೆ ಯಾವಾಗಲೂ ಉಳಿದುಕೊಂಡಿರುವ ಒಂದು ನೆನಪೇನೆಂದರೆ, ಒಂದು ದಿನ

ನಾನು ಖಾದಿಯಾನಿನಲ್ಲಿರುವ ಮಸ್ಜಿದ್ ಮುಬಾರಕ್‌ನಲ್ಲಿ ಕುಳಿತಿದ್ದಾಗ, ಮೀರ್ ಸಾಹಿಬ್ ಮಸೀದಿಯ ಮೊದಲ ಸಾಲಿನಲ್ಲಿ ನಡೆದಾಡುತ್ತಿದ್ದರು. ಅವರ ನಡೆತ ಮತ್ತು ಪ್ರಾರ್ಥನೆಗಳು ನನ್ನಲ್ಲಿ ಕುತೂಹಲ ಹುಟ್ಟಿಸಿತು. ಸ್ವಲ್ಪ ಸಮಯದ ನಂತರ, ನಾನು ಧೈರ್ಯ ಮಾಡಿ ಮುಂದೆ ಹೋಗಿ, ನೀವು ಮಸೀದಿಯ ಮೊದಲ ಸಾಲಿನಲ್ಲಿ ಏಕೆ ನಡೆದಾಡುತ್ತಿದ್ದೀರಿ? ಎಂದು ಕೇಳಿದೆ. ಅವರು ಉತ್ತರಿಸಿದರು: ಹಝ್ರತ್ ಮುಸ್ಲಿಹ್ ಮೌಊದ್(ರ) ಇದೇ ಜಾಗದಲ್ಲಿ ನಡೆದಾಡುವುದನ್ನು ನಾನು ಕಂಡಿದ್ದೇನೆ. ನಾನು ಸಹ ಅವರ ಚರ್ಯೆಯನ್ನು ಅನುಸರಿಸುತ್ತಿದ್ದೇನೆ ಎಂದು ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್(ರ)ರ ಮೇಲೆ ಅವರಿಗೆ ವಿಶಿಷ್ಟ ಪ್ರೀತಿ ಇತ್ತು.

ಒಟ್ಟಾರೆ, ಅವರು ಖಿಲಾಫತಿನ ಮಹಾನ್ ಸಹಾಯಕ ಮತ್ತು ಬೆಂಬಲಿಗರಾಗಿದ್ದರು, ತ್ಯಾಗಶಾಲಿಯಾಗಿದ್ದರು, ಪ್ರತಿಯೊಂದು ಮಾತನ್ನು ಪಾಲಿಸುವವರಾಗಿದ್ದರು, ನಿಷ್ಠಾವಂತರಾಗಿದ್ದರು. ಅವರು ಎಂತಹ ಉತ್ತಮ ಸಹಾಯಕರಾಗಿದ್ದರು ಎಂದರೆ ಅಂತಹವರು ಅಪರೂಪವಾಗಿ ಸಿಗುತ್ತಾರೆ. ಸನ್ನಡತೆಯ ವಿದ್ವಾಂಸರಾಗಿದ್ದರು. ಕನಿಷ್ಠಪಕ್ಷ ನನಗೆ ಅವರಂತಹ ಉದಾಹರಣೆ ಈಗ ಕಂಡುಬರುತ್ತಿಲ್ಲ. ಅಲ್ಲಾಹನ ಖಜಾನೆಯಲ್ಲಿ ಯಾವುದೇ ಕೊರತೆಯಿಲ್ಲ. ಅಲ್ಲಾಹನು ಇಂತಹ ಮಾದರಿಪುರುಷರನ್ನು ಇನ್ನಷ್ಟು ಸೃಷ್ಟಿಸಲಿ ಮತ್ತು ಅಹ್ಮದಿಯಾ ಖಿಲಾಫತಿಗೆ ಇಂತಹ ನಿಷ್ಠಾವಂತ, ಪ್ರಾಮಾಣಿಕ ಮತ್ತು ಧರ್ಮನಿಷ್ಠ ಸಹಾಯಕರನ್ನು ಅಲ್ಲಾಹನು ದಯಪಾಲಿಸುತ್ತಾ ಇರಲಿ.

ಎರಡನೇ ಪ್ರಸ್ತಾಪ ಒಬ್ಬ ಅಹ್ಮದಿ ಸಹೋದರನ ಬಗ್ಗೆಯಾಗಿದೆ. ಕರಾಚಿಯ ಗುಲಾಮ್ ರಸೂಲ್ ಸಾಹಿಬ್‌ರ ಪುತ್ರ ಡಾಕ್ಟರ್ ತಾಹಿರ್ ಮಹ್ಮೂದ್ ಸಾಹಿಬ್. ಅವರು ಇತ್ತೀಚೆಗೆ ಸೆರೆಯಲ್ಲಿದ್ದಾಗಲೇ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ದಿವಂಗತ ತಾಹಿರ್ ಮಹ್ಮೂದ್ ಸಾಹಿಬ್, ಕರಾಚಿಯ ಹಲ್ಕ ಮಲೀರ್ ಕಾಲೋನಿಯ ಅಧ್ಯಕ್ಷರಾಗಿದ್ದರು. ಮಲೀರ್ ಕಾಲೋನಿಯ ಅಹ್ಮದಿಯಾ ಮಸೀದಿಯ ನಿರ್ಮಾಣ ಶೈಲಿ ಮತ್ತು ಅಲ್ಲಿ ಜುಮುಅ ನಮಾಝ್ ನಿರ್ವಹಿಸಿದ್ದನ್ನು ನೆಪವಾಗಿಟ್ಟುಕೊಂಡು ಇವರನ್ನು ಮತ್ತು ಇತರ ಇಬ್ಬರು ಅಹ್ಮದಿಯರನ್ನು ಬಂಧಿಸಲಾಗಿತ್ತು. ನ್ಯಾಯಾಲಯದಲ್ಲಿ, ವಿರೋಧಿಗಳ ಗುಂಪು ಅವರ ಮೇಲೆ ಹಲ್ಲೆ ಮಾಡಿ, ಅವರನ್ನು ಹಿಂಸೆಗೆ ಒಳಪಡಿಸಿತು. ಪೊಲೀಸ್ ಠಾಣೆಯಲ್ಲೂ ಅವರನ್ನು ಹಿಂಸಿಸಿ, ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರನ್ನು ನಿಂದಿಸಲು ಒತ್ತಾಯಿಸಲಾಯಿತು. ಅವರು ಎರಡು ತಿಂಗಳ ಕಾಲ ಜೈಲಿನಲ್ಲಿ ಕಳೆದರು. ಮರಣಕ್ಕೆ ಕೆಲವು ದಿನಗಳ ಮೊದಲು, ಕಿಡ್ನಿಯ ಸೋಂಕಿನಿಂದಾಗಿ ಅವರ ಆರೋಗ್ಯ ಹದಗೆಟ್ಟಿತು ಮತ್ತು ಅವರು ಆಸ್ಪತ್ರೆಯಲ್ಲಿ ನಿಧನರಾದರು. ನಿಧನದ ವೇಳೆ ಆಸ್ಪತ್ರೆಯಲ್ಲಿಯೂ ಅವರ ಕೈಗಳಿಗೆ ಬೇಡಿಗಳನ್ನು ಹಾಕಲಾಗಿತ್ತು. ಸೆರೆಯ ಕಷ್ಟಗಳನ್ನು ಅನುಭವಿಸಿದ ಕಾರಣದಿಂದ ಅವರಿಗೆ ಹುತಾತ್ಮರ ಸ್ಥಾನ ಲಭಿಸಿದೆ. ಅವರು ವಸಿಯ್ಯತ್ ಮಾಡಿದ್ದರು. ಅಧ್ಯಕ್ಷರಾಗಿ, ದಅ್‌ವತ್ ಇಲಲ್ಲಾಹ್ ಸೆಕ್ರೆಟರಿಯಾಗಿ ಸೇವೆ ಸಲ್ಲಿಸಿದ್ದರು. ಪತ್ನಿ, ಪುತ್ರಿ ಮತ್ತು ಮೂವರು ಪುತ್ರರನ್ನು ಅವರು ಅಗಲಿರುವರು. ಅವರ ಪುತ್ರ ಜಮಾಅತಿನ ಮುಬಲ್ಲಿಗ್ ಆಗಿರುವರು.

(ಹುಝೂರ್ ಹೇಳಿದರು:) ಜುಮಾ ನಮಾಝಿನ ನಂತರ ಜನಾಝ ಗ಼ಾಯಿಬ್ ನಮಾಝನ್ನು ನಿರ್ವಹಿಸಲಾಗುವುದು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
At, ***'Masjid Mubarak'***, *Islamabad, Tilford*, U.K. On 16-05-2025
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon